

# ಆನೆ ಚಗ್ತೆ

■ ಚಿತ್ರ ಬರಹ:
**ಸಹನಾ ಕಾಂತಬೈಲು**



ಹಳದಿ ತೇರಿನಂತೆ ಕಂಗೊಳಿಸುವ ಈ ಗಿಡದ ಹೆಸರು (ಆನೆ ಚಗ್ತೆ) ಸ್ವಲ್ಪ ವಿಚಿತ್ರವಾಗಿಯೇ ಕೇಳಿಸುತ್ತದೆ. ಇದು ಕರಾವಳಿ ಹಾಗೂ ಮಲೆನಾಡು ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ಒಂದು ಕಳೆ ಸಸ್ಯ. ನೀರಿನ ಆಶ್ರಯವಿರುವಲ್ಲಿ, ನದಿ ತೋಡುಗಳ ಬದಿಯಲ್ಲಿ ತನ್ನಿಂದ ತಾನೇ ಬೆಳೆಯುತ್ತದೆ. ಐದರಿಂದ ಹತ್ತು ಅಡಿ ಎತ್ತರದವರೆಗೂ ಬೆಳೆಯುವ ಆನೆ ಚಗ್ತೆ ಗಿಡ ಒಂದು ರೀತಿಯ ವಾಸನೆಯಿಂದ ಕೂಡಿದೆ.

ಇದು ಬಿಡುವ ಹಳದಿ ಹೂಗಳ ಗೊಂಚಲು ನೋಡಲು ತುಂಬ ಚಂದ. ಈ ಗೊಂಚಲು ಹಲವು ದಿನಗಳವರೆಗೆ ಕೆಡದೆ ಗಿಡದಲ್ಲಿ ಉಳಿಯುತ್ತದೆ. ಸಂಸ್ಕೃತದಲ್ಲಿ ಇದನ್ನು ದದ್ರುಘ್ನ ಎಂಬ ಹೆಸರಿನಿಂದ ಕರೆಯುತ್ತಾರೆ.

ಆನೆ ಚಗ್ತೆ ಔಷಧೀಯ ಗುಣಗಳನ್ನೂ ಹೊಂದಿದೆ. ಇದರ ಎಲೆಗಳ ರಸಲೇಪ ಹಲವು ಚರ್ಮ ರೋಗಗಳಿಗೆ ರಾಮಬಾಣ. ನಿಂಬೆ ರಸದೊಂದಿಗೆ ಆನೆ ಚಗ್ತೆ ಎಲೆಗಳ ರಸವನ್ನು ಮಿಶ್ರ ಮಾಡಿ ಹಚ್ಚಿದರೆ ಬಿಳಿಯ ಸಿಬ್ಬ ಮಾಯವಾಗುವುದು. ಇದು ರಿಂಗ್‌ವರ್ಮ್ ಎಂಬ ಚರ್ಮರೋಗ ನಿವಾರಕವಾದುದರಿಂದ ಇಂಗ್ಲಿಷ್‌ನಲ್ಲಿ ಇದನ್ನು 'ರಿಂಗ್‌ವರ್ಮ್ ಪ್ಲಾಂಟ್' ಎಂದು ಕರೆಯುತ್ತಾರೆ. ಇದರ ಬೀಜಗಳಿಂದ ಕಾಫಿಯ ಹಾಗೆ ಪೇಯವನ್ನು ಮಾಡಿ ಕುಡಿಯುತ್ತಾರೆ. ಜಾನುವಾರುಗಳಿಗೆ ರೋಮ ಉದುರುವ ಕಾಯಿಲೆ ಇದ್ದರೆ ಆನೆ ಚಗ್ತೆ ಎಲೆಗಳನ್ನು ಅರೆದು ಹಚ್ಚುವುದರಿಂದ ವಾಸಿಯಾಗುವುದು.